## ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರ ಹೆಸರು** : ಶ್ರೀ ಗೋವಿಂದ ರಾಜು
(ವಿಧಾನಸಭೆಯಿಂದ ಚುನಾಯಿತರಾದವರು)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 774 (908)

**ವಿಷಯ** : ಕೋಲಾರ ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ

**ಉತ್ತರಿಸಬೇಕಾದ ದಿನಾಂಕ** : 14.03.2025

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಿಂದ ಇಲ್ಲಿಯವರೆಗೂ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಾಣ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಕೋಲಾರ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಿಂದ ಇಲ್ಲಿಯವರೆಗೆ 32 ಘಟಕಗಳು ಅನುಮೋದನೆಗೊಂಡಿರುತ್ತವೆ. ಅವುಗಳಲ್ಲಿ ಬಂಗಾರಪೇಟೆ ತಾಲ್ಲೂಕಿಗೆ 16 ಘಟಕಗಳು ಅನುಮೋದನೆಗೊಂಡಿದ್ದು, 2 ಘಟಕಗಳು ನಿರ್ಮಾಣವಾಗಿದ್ದು, ಇನ್ನುಳಿದಂತೆ 14 ಘಟಕಗಳು ಪ್ರಗತಿಯ ಹಂತದಲ್ಲಿರುತ್ತವೆ ಹಾಗೂ ಮುಳಬಾಗಿಲು ತಾಲ್ಲೂಕಿಗೆ 16 ಘಟಕಗಳು ಅನುಮೋದನೆಗೊಂಡಿದ್ದು ಎಲ್ಲಾ ಘಟಕಗಳ ನಿರ್ಮಾಣ ಪೂರ್ಣಗೊಂಡಿರುತ್ತವೆ. |
| ಆ) | ಸರ್ಕಾರದ ನಿಯಮದ ಪ್ರಕಾರ ಟೆಂಡರ್ ಅವಧಿ ಮುಗಿದಿದ್ದರೂ ಅನೇಕ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸದೆ, ಕೆಲ ಕಂಪನಿಯವರೇ ನಿರ್ವಹಣೆ ಮಾಡಿಕೊಂಡು ಸ್ಮಾರ್ಟ್ ಕಾರ್ಡ್‌ಗಳ ರೀಚಾರ್ಜ್ ಹೆಸರಿನಲ್ಲಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅಂತಹ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ. |
| ಇ) | ಅವಧಿ ಮುಗಿದಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸದಿರಲು ಕಾರಣಗಳೇನು; ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಅವಧಿ ಮುಗಿದಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲು ಸುತ್ತೋಲೆ ಸಂಖ್ಯೆ: ಗ್ರಾ.ಅ.ಪ. / 21 / ಗ್ರಾ.ನೀ.ಸ (8) / 2017 / 918, ದಿನಾಂಕ: 21.09.2024 (ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ). |
| ಈ) | ರೀಚಾರ್ಜ್ ಹೆಸರಿನಲ್ಲಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವ ಸಂಸ್ಥೆಗಳು ಯಾವುವು? (ವಿವರಗಳನ್ನು ಒದಗಿಸುವುದು) | ಅಂತಹ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ. |

RDWSD/CE/TECH/148/2024-25

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಮಾಹಿತಿ
ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ-1

**ಕರ್ನಾಟಕ ಸರ್ಕಾರ**
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಆಯುಕ್ತರ ಕಛೇರಿ, 2ನೇಮಹಡಿ, "ಇ" ಬ್ಲಾಕ್, ಕೆ.ಹೆಚ್.ಬಿ.ಕಟ್ಟಡ, ಕಾವೇರಿ ಭವನ,
ಕೆ.ಜಿ. ರಸ್ತೆ, ಬೆಂಗಳೂರು - 560009, ದೂ.ಸಂ. 080-22240508, **e-mail:krwssd@gmail.com**

ಸಂ: ಗ್ರಾಅಪ/21/ಗ್ರಾನೀಸ(8)/2017 / 918 ದಿನಾಂಕ: 21 .09.2024

21 SEP 2024

## ಸುತ್ತೋಲೆ

ವಿಷಯ: ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆ ಹಾಗೂ ನಿರ್ವಹಣೆ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಪ್ರತಿಯೊಂದು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸುವ ನಿಟ್ಟಿನಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಈ ಇಲಾಖೆಯ ಸೂಚನೆಗಳ ಮೇರೆಗೆ ಘಟಕಗಳ ಅಳವಡಿಕೆ ಹಾಗೂ ನಿರ್ವಹಣೆಯೊಂದಿಗೆ ನೂತನವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಬೇಕಾಗಿರುತ್ತದೆ.

ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸುವ ಮುನ್ನ ನೀರಿನ ಲಭ್ಯತೆ, ನೀರಿನ ಗುಣಮಟ್ಟ, ಮೂರು ಹಂತದಲ್ಲಿ ನೀರಿನ ಪರೀಕ್ಷಾ ವರದಿ ಪಡೆಯುವುದು, ಟೆಂಡರ್ ಕರೆಯುವುದು, ಒಂದೇ ಮಾದರಿಯ ಕಟ್ಟಡದ ವಿನ್ಯಾಸ, ವಿಸ್ತೀರ್ಣ, ದರ ನಿಗದಿ ಮಾಡಲು ಹಾಗೂ ಘಟಕಗಳಿಗೆ BIS/ISO ಪ್ರಮಾಣೀಕೃತ ಉತ್ತಮ ಗುಣಮಟ್ಟದ ಉಪಕರಣಗಳನ್ನು ಅಳವಡಿಸಿಕೊಂಡು ನಿಯಮಗಳ ಪಾಲನೆಯಲ್ಲಿ ಏಕರೂಪತೆ ತರಲು ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವ ರೀತಿಯಲ್ಲಿ ಸ್ಪಷ್ಟ ನಿರ್ದೇಶನಗಳನ್ನು ನೀಡಿ ಘಟಕ ನಿರ್ವಾಹಕರಿಗೆ ತರಬೇತಿಯನ್ನು ನೀಡಿ, ಹೆಚ್ಚಿನ ಸಮಯ ಘಟಕದ ಬಳಿಯೇ ಕಾರ್ಯನಿರ್ವಹಿಸುವುದನ್ನು ಕಡ್ಡಾಯಗೊಳಿಸಲು ತಿಳಿಸಿದೆ.

ಅನುಷ್ಠಾನದ ಹಂತದಲ್ಲಿ ಗುತ್ತಿಗೆದಾರರಿಗೆ ಕರಾರಿನಂತೆ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಿದ್ದಲ್ಲಿ ಅದರ ಅವಧಿ ನಂತರ ಇಲಾಖೆಯಿಂದ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಲಾಗಿರುವ ಘಟಕಗಳಿಗೆ ಮಾಹೆಯಾನ ರೂ.3,000/- ದಂತೆ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು, ಗುತ್ತಿಗೆದಾರರಿಗೆ ಪಾವತಿಸುವುದು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸುವ ಘಟಕಗಳಿಗೆ ಸಹ ಮಾಹೆಯಾನ ರೂ. 3,000/- ರಂತೆ ಪಾವತಿಸುವುದು. ನೀರಿನ ಮಾರಾಟದಿಂದ ಬರುವ ಹೆಚ್ಚುವರಿ ಮೊತ್ತವನ್ನು ಗುತ್ತಿಗೆದಾರ / ಗ್ರಾಮ ಪಂಚಾಯಿತಿಗಳ ಆದಾಯಕ್ಕೆ ಸೇರಿದ್ದು, ವಿದ್ಯುತ್ ಬಿಲ್ ಪಾವತಿಗೆ ಬಳಸಬೇಕಾಗಿರುತ್ತದೆ.

ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕುಡಿಯುವ ನೀರಿನ ಸಮರ್ಪಕ ವಿತರಣೆಗೆ ನೀರುಘಂಟಿ (Waterperson) ಗಳ ನೇರ ಭಾಗವಹಿಸುವಿಕೆ ಇರುವುದರಿಂದ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ ಮುಗಿದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸಂಬಂಧಿಸಿದ ಅಧಿಕಾರಿಗಳು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಬಹುದಾಗಿರುತ್ತದೆ. ಪ್ರಸ್ತುತ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿರುವ ಘಟಕಗಳನ್ನು ಗುತ್ತಿಗೆ ಅವಧಿ ಮುಗಿಯುವ ಹಂತದಲ್ಲಿ ಗುತ್ತಿಗೆದಾರರಿಂದ ಸಮರ್ಪಕ ನಿರ್ವಹಣೆಗೆ ಕರಾರಿನಲ್ಲಿನಂತೆ ಕ್ರಮ ಜರುಗಿಸಿ ಅವಧಿ ಮುಗಿದ ನಂತರ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಬಹುದಾಗಿದೆ. ಗುತ್ತಿಗೆ ಅವಧಿಯಲ್ಲಿ ಇರುವ ಕುಡಿಯುವ ನೀರಿನ ಘಟಕಗಳ ವಿದ್ಯುತ್ ಬಿಲ್ ಪಾವತಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಮೀಟರ್ ಮಾಪನವನ್ನು ಅಳವಡಿಸಿ, ವಿದ್ಯುತ್ ಶುಲ್ಕವನ್ನು ಲೆಕ್ಕಾಚಾರ ಮಾಡಿ ಏಜೆನ್ಸಿಗಳಿಂದ ಬಿಲ್ ಪಾವತಿ ಪಡೆಯುವಂತೆ ಕ್ರಮ ವಹಿಸಲು ತಿಳಿಸಿದೆ.

ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು,
ಗ್ರಾ. ಮತ್ತು ಪಂ. ಇಲಾಖೆ ರವರಿಂದ ಅನುಮೋದಿತ

Nagalingaiah
ನಿರ್ದೇಶಕರು,
ಗ್ರಾ.ಕು.ನೀ & ನೈ ಇಲಾಖೆ,
ಬೆಂಗಳೂರು.

**ರವರಿಗೆ : -**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳು ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ಅಧೀಕ್ಷಕ ಇಂಜಿನಿಯರ್ ಗಳು, ಗ್ರಾ.ಕು.ನೀ. & ನೈ. ಇಲಾಖೆಯ ಎಲ್ಲಾ ವೃತ್ತಗಳು ರವರಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಕಾರ್ಯಪಾಲಕ ಇಂಜಿನಿಯರ್ ಗಳು, ಗ್ರಾ.ಕು.ನೀ. & ನೈ. ಇಲಾಖೆಯ ಎಲ್ಲಾ ವಿಭಾಗಗಳು ರವರಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.